**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 21 ಇಎಸ್‌ಟಿ(8) 2022

**ಆಯುಕ್ತರ ಕಛೇರಿ,**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001,
ದಿನಾಂಕ:08-08-2024

**ಅಧಿಸೂಚನೆ**

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ (HK) ಮೀಸಲಿರಿಸಿದ ಹುದ್ದೆಗಳೆದುರಾಗಿ ಕಾರ್ಯನಿರ್ವಹಿಸುತ್ತಿರುವ ಉಳಿದ ಮೂಲವೃಂದದ (RK) ಬೋಧಕ ಸಿಬ್ಬಂದಿಯನ್ನು ಸ್ಥಳಾಂತರ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 206 ಡಿಟಿಇ 2014 ದಿನಾಂಕ:22-04-2015.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 136 ಡಿಟಿಇ 2022 ದಿನಾಂಕ:11-01-2023.
3. ಈ ಕಛೇರಿ ಅಧಿಸೂಚನೆ ಸಂಖ್ಯೆ: ಡಿಟಿಇ 21 ಇಎಸ್‌ಟಿ(8) 2022 ದಿನಾಂಕ:03-02-2023.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020, ದಿನಾಂಕ: 29-01-2021.
5. ಈ ಕಛೇರಿ ಹಿಂಬರಹ ಸಂಖ್ಯೆ: ಡಿಟಿಇ 21 ಇಎಸ್‌ಟಿ(8) 2022/1356 ದಿನಾಂಕ:01-02-2024.

** ** **

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಭಾರತದ ಸಂವಿಧಾನದ ಅನುಚ್ಛೇಧ 371 (ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಹೊರಡಿಸಿರುವ ಕಲ್ಯಾಣ-ಕರ್ನಾಟಕ ಪ್ರದೇಶದ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಒಟ್ಟಾರೆ ಒಂದು ಹುದ್ದೆ ಮಂಜೂರಾಗಿದ್ದಲ್ಲಿ ಮೀಸಲಾತಿ ಕಲ್ಪಿಸದೆ. ಗ್ರೂಪ್-ಎ (ಕಿರಿಯ ಶ್ರೇಣಿ) ಮತ್ತು ಗ್ರೂಪ್-ಬಿ ವೃಂದಗಳಲ್ಲಿ, ಶೇ.75 ರಷ್ಟು, ಗ್ರೂಪ್-ಸಿ ವೃಂದದಲ್ಲಿ ಶೇ.80 ರಷ್ಟು ಹಾಗೂ ಗ್ರೂಪ್-ಡಿ ವೃಂದದಲ್ಲಿ ಶೇ.85 ರಷ್ಟು ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಿ ಹಾಗೂ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ (ಕೇಂದ್ರ ಕಛೇರಿ) ಬೆಂಗಳೂರು ಹಾಗೂ ರಾಜ್ಯದ ರಾಜದಾನಿ (ಬೆಂಗಳೂರು ನಗರದ ಬಿ.ಬಿ..ಎಂ.ಪಿ ವ್ಯಾಪ್ತಿ) ಪ್ರದೇಶದಲ್ಲಿನ ತಾಂತ್ರಿಕ. ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಂಸ್ಥೆಗಳಲ್ಲಿನ ಗ್ರೂಪ್-ಎ (ಕಿರಿಯ ಶ್ರೇಣಿ) ರಿಂದ ಗ್ರೂಪ್-ಡಿ ವೃಂದಗಳಲ್ಲಿ ಶೇ.8 ರಷ್ಟು ಹುದ್ದೆಗಳನ್ನು ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿ ಅಧಿಸೂಚಿಸಲಾಗಿದೆ.

ಉಲ್ಲೇಖ (2) ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ (HK) ಮೀಸಲಿರಿಸಿದ ಹುದ್ದೆಗಳೆದುರಾಗಿ ಕಾರ್ಯನಿರ್ವಹಿಸುತ್ತಿರುವ ಉಳಿದ ಮೂಲವೃಂದದ (RK) ಬೋಧಕ ಸಿಬ್ಬಂದಿಯನ್ನು ಸ್ಥಳಾಂತರಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರ ಕಂಡಿಕೆ 5(d) ರಂತೆ ಪರಿಶೀಲಿಸಿ ಕ್ರಮ ವಹಿಸುವಂತೆ ತಿಳಿಸಲಾಗಿದೆ.

ಅದರಂತೆ, ರಾಜ್ಯದ ರಾಜಧಾನಿ (ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿ) ಪ್ರದೇಶದಲ್ಲಿನ ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದ ಸರ್ಕಾರಿ ಎಸ್.ಕೆ.ಎಸ್.ಜೆ.ಐ.ಟಿ ಮಹಾವಿದ್ಯಾಲಯ ಸಂಸ್ಥೆಯಲ್ಲಿನ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಎ) ಹಾಗೂ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಬಿ) ವೃಂದಗಳಲ್ಲಿ ಶೇ. 8% ರಷ್ಟು ಕಲ್ಯಾಣ ಕರ್ನಾಟಕ ಮೂಲ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳಲ್ಲಿ ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಳಿದ ಮೂಲ ವೃಂದದ **ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಎ) ಕಂಪ್ಯೂಟರ್ ಸೈನ್ಸ್ ವಿಭಾಗದ ಹಾಗೂ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಬಿ) ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್** ವಿಭಾಗದ ಬೋಧಕ ಸಿಬ್ಬಂದಿಗಳನ್ನು ಗುರುತಿಸಲಾಗಿದ್ದು, ಸದರಿ ಬೋದಕ ಸಿಬ್ಬಂದಿಗಳ ಪಟ್ಟಿಯನ್ನು **ಅನುಬಂಧ-1** ರಲ್ಲಿ ಅಧಿಸೂಚಿಸಿದೆ.

ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದ ಸರ್ಕಾರಿ ವಿವಿಧ ಸರ್ಕಾರಿ ಇಂನಿಜಿಯರಿಂಗ್ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ಮೂಲ ವೃಂದಕ್ಕೆ ಸೇರಿದ **ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಎ) ಕಂಪ್ಯೂಟರ್ ಸೈನ್ಸ್ ವಿಭಾಗದ ಹಾಗೂ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಬಿ) ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್** ವಿಭಾಗದ ಬೋದಕ ಸಿಬ್ಬಂದಿಗಳನ್ನು ಗುರುತಿಸಲಾಗಿದ್ದು, ಸದರಿ ಬೋದಕ ಸಿಬ್ಬಂದಿಗಳ ಪಟ್ಟಿಯನ್ನು **ಅನುಬಂಧ-2** ರಲ್ಲಿ ಅಧಿಸೂಚಿಸಿದೆ.

**ಸೂಚನೆಗಳು:**

1. **ಅನುಬಂಧ-1** ರಲ್ಲಿ ಅಧಿಸೂಚಿಸಲಾದ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಎ) ವೃಂದದ ಕಂಪ್ಯೂಟರ್ ಸೈನ್ಸ್ ವಿಭಾಗದ ಬೋದಕರು ಪ್ರದರ್ಶಿಸಿಲಾಗುವ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವುದು.
2. **ಅನುಬಂಧ-1** ರಲ್ಲಿ ಅಧಿಸೂಚಿಸಲಾದ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಬಿ) ವೃಂದದ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ವಿಭಾಗದ ಪ್ರದರ್ಶಿಸಿಲಾಗುವ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವುದು.
3. **ಅನುಬಂಧ-1** ರಲ್ಲಿ ಅಧಿಸೂಚಿಸಲಾದ ಬೊದಕರು ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಂಡ ನಂತರದಲ್ಲಿ ತೆರವಾಗುವ ಕಲ್ಯಾಣ ಕರ್ನಾಟಕ ಸ್ಥಳೀಯ ಮೂಲ ವೃಂದಕ್ಕೆ ಮೀಸಲಿರಿಸಿದ ಖಾಲಿ ಹುದ್ದೆಗಳನ್ನು **ಅನುಬಂಧ-2** ಮತ್ತು ಅನುಬಂಧ ರಲ್ಲಿನ ಬೋದಕರು ಜೇಷ್ಟಗೆ ಅನುಗುಣವಾಗಿ ಸ್ಥಳ ಆಯ್ಕೆ ಮಾಡಿಕೊಳ್ಳುವುದು.
4. **ಅನುಬಂಧ-2** ರಲ್ಲಿನ ಬೋದಕರು ಸ್ಥಳ ಆಯ್ಕೆ ಮಾಡಿಕೊಳ್ಳುವುದು ಐಚ್ಛಿಕವಾಗಿರುತ್ತದೆ.
5. ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ಮೂಲ ವೃಂದಕ್ಕೆ ಮೀಸಲಿರಿಸಿರುವ ಹುದ್ದೆಗಳೆದುರಾಗಿ ಕಾರ್ಯನಿರ್ವಹಿಸುತ್ತಿರುವ ಉಳಿದ ಮೂಲ ವೃಂದದ ಬೋದಕ ವರ್ಗದವರನ್ನು ಸ್ಥಳಾಂತರ ಮಾಡುವ ಸಂಬಂಧ ದಿನಾಂಕ: 09-08-2024 ರಂದು ಅನ್‌ಲೈನ್ ಮುಖಾಂತರ ಕೌನ್ಸಿಲಿಂಗ್ ಅನ್ನು ನಿಗಧಿಪಡಿಸಲಾಗಿದೆ.

6. ನಿಗಧಿಪಡಿಸಲಾದ ಸಮಯದಲ್ಲಿ ಅಧಿಸೂಚಿಸಲಾದ ಬೋಧಕ ವರ್ಗದವರು ಮಾತ್ರವೇ ಸಂಸ್ಥೆಯ ಪ್ರಾಂಸುಪಾಲರ ಸಮ್ಮುಖದಲ್ಲಿ ಲಾಗಿನ್ ಆಗಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸತಕ್ಕದ್ದು ಹಾಗೂ ಸ್ಥಳ ಆಯ್ಕೆ ಮಾಡಿಕೊಳ್ಳುವುದು.

7. ಸ್ಥಳ ಆಯ್ಕೆ ವಿಷಯವನ್ನು ಹೊರತುಪಡಿಸಿ ಇತರೇ ವಿಷಯಗಳ ಕುರಿತು ಚರ್ಚೆಗೆ ಅವಕಾಶವಿರುವುದಿಲ್ಲ. ಈ ವಿಷಯದ ಉಲ್ಲಂಘನೆಯನ್ನು ದುರ್ನಡತೆಯನ್ನು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು :**

1. ಮಾನ್ಯ ಆಯುಕ್ತರ ಅಪ್ತ ಶಾಖೆಗೆ.
2. ಮಾನ್ಯ ನಿರ್ದೇಶಕರ ಅಪ್ತ ಶಾಖೆಗೆ.
3. ಜಂಟಿ ನಿರ್ದೇಶಕರು (ಆಡಳಿತ) ಅಪ್ತ ಶಾಖೆಗೆ.
4. ಇ- ಆಡಳಿತ ವಿಭಾಗಕ್ಕೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.
5. ಕಛೇರಿ ಪ್ರತಿ.

ಅನುಬಂಧ-1

## ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಶೇ.8 ರಷ್ಟು ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಳಿದ ಮೂಲ ವೃಂದದ ಸಿಬ್ಬಂದಿಗಳ ಪಟ್ಟಿ

| SL. NO. | Emp Id | Emp Name | Designation | College Name | CRSNAME | HK Claimed | Date of join into service | GRADATION RANK |
|---|---|---|---|---|---|---|---|---|
| 1 | 2510270 | PRADEEP KUMAR K | ASST. PROFESSOR (GRP-A) | Govt.S K S J T Institute of Engineering, Bangalore | COMPUTER SCIENCE AND ENGG | N | 14-10-2010 | 6 |
| 2 | 2511286 | DR SATHISHA N | ASST. PROFESSOR (GRP-B) | Govt.S K S J T Institute of Engineering, Bangalore | ELECTRONICS & COMMUNICATION | N | 2011-05-16 | 9 |

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಅನುಬಂಧ-2

**ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 197 ಡಿಟಿಇ 2017 ದಿನಾಂಕ: 11-01-2018 ರನ್ವಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಎ) ಕಲ್ಯಾಣ ಕರ್ನಾಟಕ ಸ್ಥಳೀಯ ಮೂಲ ವೃಂದದ ಜೇಷ್ಟತಾ ಪಟ್ಟಿ**

| SL. NO. | Emp Id | Emp Name | Designation | College Name | CRSNAME | HK Claimed | Date of join into service | GRADATION RANK |
|---|---|---|---|---|---|---|---|---|
| 1 | 2530113 | NAGARAJ B PATIL | ASST, PROFESSOR (GROUP-A) | Government Engineering College, Hoovina Hadagali | COMPUTER SCIENCE AND ENGG | Y | 04-10-2010 | 2 |
| 2 | 2199674 | DR SHASHIKALA PARAMESHWARAPPA | ASST, PROFESSOR (GROUP-A) | Government Engineering College, Raichur | COMPUTER SCIENCE AND ENGG | Y | 15-10-2010 | 3 |
| 3 | 2255911 | DR SHIVAPRAKASH | ASST, PROFESSOR (GROUP-A) | Government Engineering College, Raichur | COMPUTER SCIENCE AND ENGG | Y | 12-10-2010 | 4 |
| 4 | 2530474 | VEERESH | ASST, PROFESSOR (GROUP-A) | Government Engineering College, Talakal, Koppal | COMPUTER SCIENCE AND ENGG | Y | 26-11-2010 | 12 |
| 5 | 2308565 | GNANESHWARI G R | ASST, PROFESSOR (GROUP-A) | Government Engineering College, Viprasinagar, Gangavathi | COMPUTER SCIENCE AND ENGG | Y | 26-11-2010 | 13 |

**ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಬಿ) ಕಲ್ಯಾಣ ಕರ್ನಾಟಕ ಸ್ಥಳೀಯ ಮೂಲ ವೃಂದದ ಜೇಷ್ಟತಾ ಪಟ್ಟಿ**

| SL. NO. | Emp Id | Emp Name | Designation | College Name | CRSNAME | HK Claimed | Date of join into service | GRADATION RANK |
|---|---|---|---|---|---|---|---|---|
| 1 | 2534064 | MADHU Y B | ASST, PROFESSOR (GROUP-B) | Government Engineering College, Raichur | ELECTRONICS & COMMUNICATION | Y | 23-05-2011 | 10 |
| 2 | 2531704 | NAHEEDA THARANNUM B | ASST, PROFESSOR (GROUP-B) | Government Engineering College, Raichur | ELECTRONICS & COMMUNICATION | Y | 25-05-2011 | 38 |
| 3 | 2245095 | ANJALI CHATURE | ASST, PROFESSOR (GROUP-B) | Government Engineering College, Chamarajanagara | ELECTRONICS & COMMUNICATION | Y | 24-05-2011 | 42 |
| 4 | 2531702 | MANJU | ASST, PROFESSOR (GROUP-B) | Government Engineering College, Raichur | ELECTRONICS & COMMUNICATION | Y | 13-05-2011 | 47 |

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ